

# ರಸಬೋಧೆ

ಸ್ವಾಮಿ ಭೂತೇಶಾನಂದ
ಸಂಕಲನ : ಸ್ವಾಮಿ ಋತಾನಂದ
ಅನುವಾದ : ಸ್ವಾಮಿ ಮಂಗಳಾತ್ಮಾನಂದ

ಶ್ರೀರಾಮಕೃಷ್ಣರ ಪರಮಭಕ್ತನಾದ ಬಲರಾಮ ಬಸುವಿನ ಚಿಕ್ಕ ಮಗಳ ಹೆಸರು 'ಕೃಷ್ಣಮಯೀ' ಎಂದು. ಒಂದು ಸಲ ಆಕೆ ಬ್ರಹ್ಮಾನಂದರಿಗೆ ಮತ್ತು ಸ್ವಾಮಿ ಶಾರದಾನಂದರಿಗೆ ಭೂರಿ ಭೋಜನ ಬಡಿಸಿದ ಹಾಗೆ ಸ್ವಪ್ನ ಕಂಡಳಂತೆ. ಅದರ ನಿಮಿತ್ತ, ಅವರಿಬ್ಬರನ್ನೂ ತನ್ನ ಮನೆಗೆ ಊಟಕ್ಕೆ ಆಹ್ವಾನಿಸಿದ್ದಳು. ಮನೆಯಲ್ಲಿ ಹೆಣ್ಣುಮಕ್ಕಳ ಸಂಭ್ರಮವೋ ಸಂಭ್ರಮ. ಕೃಷ್ಣಮಯೀ ಬಹಳ ಮುತುವರ್ಜಿ ವಹಿಸಿ ಅಡುಗೆ ತಯಾರಿಸಿದಳು. ಬ್ರಹ್ಮಾನಂದರಂತೂ ಮಕ್ಕಳ ಹಾಗೆ ಬಹಳ ಸ್ಫೂರ್ತಿಯಿಂದ ಹೊಟ್ಟೆ ಬಿರಿಯುವಷ್ಟು ಊಟಮಾಡಿದರು. ಮಧ್ಯಾಹ್ನ ವಿಶ್ರಾಂತಿ ಪಡೆದು, ಸಂಜೆ ಹೊತ್ತಿಗೆ ಬೇಲೂರು ಮಠಕ್ಕೆ ಹೊರಡಲು ಅನುವಾದರು. ಇನ್ನೇನು ಗಾಡಿ ಹತ್ತಬೇಕು. ಆಗ ಬ್ರಹ್ಮಾನಂದರು ಕೃಷ್ಣಮಯಿಯ ದೊಡ್ಡ ಮಗಳನ್ನು ಕರೆದು, ಎಲ್ಲರಿಗೂ ಕೇಳುವ ಹಾಗೆ ಹೇಳಿದರು: " ನಿನ್ನ ತಾಯಿಗೆ ಹೇಳು, **'ಈ ರೀತಿಯ ಕನಸು ಮತ್ತೆ ಮತ್ತೆ ಬೀಳಲಿ'** ಎಂದು."

ಶ್ರೀಮಾತೆಯವರ ಜನ್ಮಸ್ಥಳ ಮತ್ತು ಅವರ ತಮ್ಮಂದಿರ ಜಮೀನಿನ ವಿವಾದವನ್ನು ಪರಿಹರಿಸಲು, ಸ್ವಾಮಿ ಶಾರದಾನಂದರು ಒಮ್ಮೆ ಜಯರಾಂಬಾಟಿಗೆ ಹೋಗಿದ್ದರು. ಎಲ್ಲ ಸಮಸ್ಯೆಗಳನ್ನೂ ಪರಿಹರಿಸಿಯಾದ ಮೇಲೆ ಕಾಲಿ ಮಾವ ( ಶ್ರೀಮಾತೆಯವರ ತಮ್ಮ) ಸ್ವಾಮಿ ಶಾರದಾನಂದರನ್ನು ಹೀಗೆ ಕೇಳಿದರು: "ಶರತ್, ಸ್ವಲ್ಪ ಹಣ ಕೊಡು"

"ಹಣವೇ, ಅದರಿಂದ ಏನು ಮಾಡುತ್ತೀರಿ?"

"ನಿನ್ನ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡುತ್ತೇನೆ."

ಶರತ್ ಮಹಾರಾಜರು (ಸ್ವಾಮಿ ಶಾರದಾನಂದರು) ಕಾಲಿ ಮಾವನಿಗೆ ಹಣವನ್ನಂತೂ ಕೊಟ್ಟರು. ಆದರೆ ಕಾಲಿ ಮಾವ ಅವರ ಮೇಲೆ ದಾವೆ ಹೂಡಿದರೋ ಇಲ್ಲವೋ ಗೊತ್ತಿಲ್ಲ.

ಸ್ವಾಮಿ ವಿಜ್ಞಾನಾನಂದರು ಹಲವಾರು ಅಂಗಿಗಳನ್ನು ಒಂದರ ಮೇಲೆ ಒಂದರಂತೆ ಒಂದೇ ಸಲ ಹಾಕಿಕೊಳ್ಳುತ್ತಿದ್ದರು. ಒಳಗೆ ತೆಳ್ಳಗಿನ ಬಟ್ಟೆಯ ಅಂಗಿ, ಅದರ ಮೇಲೆ ರೇಶ್ಮೆಯ ಅಂಗಿ, ಅದರ ಮೇಲೆ ಇನ್ನಷ್ಟು ದಪ್ಪದ್ದು – ಹೀಗೆ ಹಲವು ಅಂಗಿಗಳನ್ನು ಹಾಕಿಕೊಂಡು, ಮೇಲುಗಡೆ ಹತ್ತಿ ನೂಲಿನ ಕಂಬಿಯಂತಹ ಅಲ್ಕಲಾ (ಮೊಳಕಾಲಿಗಿಂತಲೂ ಕೆಳಗೆ ಇಳಿಯುವ ಒಂದು ರೀತಿಯ ಉದ್ದನೆಯ ಜುಬ್ಬಾ) ಹಾಕಿಕೊಳ್ಳುತ್ತಿದ್ದರು. ಅವರು ನಶ್ಯ ಸೇವಿಸುತ್ತಿದ್ದರು. ಒಂದು ಸಲ ತಮ್ಮ ನಶ್ಯದ ಡಬ್ಬಿಯನ್ನು ಯಾವ ಜೇಬಿನಲ್ಲಿ ಇಟ್ಟಿದ್ದಾರೆಂದು ತಿಳಿಯದೆ, ಎಲ್ಲಾ ಜೇಬುಗಳನ್ನೂ ಹುಡುಕಿದ್ದೇ ಹುಡುಕಿದ್ದು! ಅದು ಸಿಗುವುದಾದರೂ ಹೇಗೆ? ಅಷ್ಟೊಂದು ಅಂಗಿಗಳು, ಅವಕ್ಕೆ ಅಷ್ಟೊಂದು ಜೇಬುಗಳು! ಯಾವ ಅಂಗಿಯ ಯಾವ ಜೇಬಿನಲ್ಲಿಟ್ಟಾದ್ದರೆಂದು ಅವರಿಗೆ ಹೇಗೆ ತಾನೇ ತಿಳಿಯಬೇಕು, ಹೇಳಿ?! ಹುಡುಕಿ, ಹುಡುಕಿ ಸುಸ್ತಾಗಿ ಕಡೆಗೆ ಅವರು ಉದ್ಗರಿಸಿದರು : **"ಯಾವನೋ ಎಗರಿಸಿದ್ದಾನೆ!"**

ಸ್ವಾಮಿ ವಿಜ್ಞಾನಾನಂದರಿಗೆ ಒಬ್ಬ ಸಾಧುಗಳು ಸೇವಕರಾಗಿದ್ದರು. ಅವರ ಹೆಸರು ದೇವತಾ ಮಹಾರಾಜ್ ಎಂದು. ಅವರು ಒಳ್ಳೆಯ ಸಾಧುಗಳು. ವಿಜ್ಞಾನಾನಂದರು ದೇವತಾ ಮಹಾರಾಜರನ್ನು ಚೆನ್ನಾಗಿ ಬೈಯುತ್ತಿದ್ದರು. ಆದರೂ ದೇವತಾ ಮಹಾರಾಜರು ಒಂದು ಚೂರೂ ಚಕಾರವೆತ್ತದೆ, ಮೌನವಾಗಿ ಸಹಿಸಿಕೊಳ್ಳುತ್ತಿದ್ದರು. ಒಂದು ಸಲವಂತೂ ವಿಜ್ಞಾನಾನಂದರು ಭಯಂಕರವಾಗಿ ಗದರಿಸಿದರು. ಸೇವಕರಾಗಿದ್ದ ಇನ್ನೊಬ್ಬ ಸಾಧುಗಳು, "ಮಹಾರಾಜ್, ತಾವು ದೇವತಾ ಮಹಾರಾಜರಿಗೆ ತುಂಬ ಬೈಯ್ದುಬಿಟ್ಟಿರಿ. ಅವರು ಆ ಮೂಲೆಯಲ್ಲಿ ಕುಳಿತು ಅಳುತ್ತಿದ್ದಾರೆ" ಎಂದರು. ಇದನ್ನು ಕೇಳಿ ಸ್ವಾಮಿ ವಿಜ್ಞಾನಾನಂದರು ಹೇಳಿದರಂತೆ: "ಹೌದೇನು! ಹಾಗಾದರೆ ಇವತ್ತು ನಾನು ಯಶಸ್ವಿಯಾದೆ!" ಹೀಗೆ ಹೇಳಿ, ಮೆಚ್ಚುಗೆಯ ಮಾತುಗಳನ್ನು ಆಡಿದರಂತೆ: **"ನಿಜವಾಗಿಯೂ ಅವನು ದೇವತೆಯೇ ಸರಿ!"**

# 'ನರರೂಪಧರ ನಿರ್ಗುಣ ಗುಣಮಯ್'

ಸ್ವಾಮಿ ಚೇತನಾನಂದ



**ದೀ**ಪ ಬೆಳಗುತ್ತಿದೆ. ತನ್ನ ಸುತ್ತಲಿನ ಅಂಧಕಾರವನ್ನು ತೊಲಗಿಸಿ ಬೆಳಕು ಬೀರುವುದೇ ಪ್ರಜ್ವಲಿಸುವ ದೀಪದ ಸ್ವಭಾವ. ಮಾನವರ ಅತಿ ದಾರುಣವಾದ ಮೋಹಾಂಧಕಾರವನ್ನು ತೊಲಗಿಸಲು ಈ ಯುಗದ ನರರೂಪಧಾರಿ ಭಗವಾನ್ ಶ್ರೀರಾಮಕೃಷ್ಣರು ತಮ್ಮ ಸ್ವಮಹಿಮೆಯಿಂದ  ಧರ್ಮದ ದೀಪವನ್ನು ಬೆಳಗಿಸಿ ದೇದೀಪ್ಯಮಾನರಾಗಿದ್ದಾರೆ. ಶ್ರೀರಾಮಕೃಷ್ಣರ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಗೊಳಿಸುತ್ತಾರೆ: "ವರ್ತಮಾನಕಾಲದ ಈ ದಿಗಿಲುಗೊಳಿಸುವ ಮಾನಸಿಕ ಮತ್ತು ನೈತಿಕ ಪತನದ ವಿಕೃತ ಕಪ್ಪು ಛಾಯೆಯಂತೆ, ಈ ಪುಣ್ಯಭೂಮಿಯ ಆಗಸವನ್ನು ಹಿಂದಿನ ಯಾವುದೇ ಅಮಾವಾಸ್ಯೆಯ ಕರಾಳ ಕಾರ್ಗತ್ತಲೂ ಆವರಿಸಿರಲಿಲ್ಲ!  ಈ ಕಾರಣದಿಂದಾಗಿಯೇ ಪರಮಕಾರುಣ್ಯಮೂರ್ತಿಯಾದ ಸರ್ವಯುಗಾವತಾರಗಳ ತುಲನೆಯಲ್ಲಿ ಶ್ರೇಷ್ಠತಮವೂ, ಸಂಪೂರ್ಣವೂ, ಸರ್ವಭಾವಗಳ ಸಮನ್ವಯರೂಪವೂ, ಸರ್ವವಿದ್ಯೆಗಳಿಗೆ ಸಹಾಯಕವೂ ಆದ ಯುಗಾವತಾರರೂಪದಲ್ಲಿ ಭಗವಂತನ ಆವಿರ್ಭಾವವಾಯಿತು."

ಈ ನಶ್ವರವಾದ ಧರಣಿಯಲ್ಲಿ ಈಶ್ವರ, ಅನಂತನಾದರೂ ಸಾಂತನಾಗಿ, ನಿರ್ಗುಣನಾದರೂ ಗುಣಮಯನಾಗಿ, ಅರೂಪನಾದರೂ ರೂಪಧರನಾಗಿ ಅವತರಿಸುತ್ತಾನೆ. ಹೀಗೆ ಅವನು ಮಾಡುವುದು ನರಲೀಲೆಯನ್ನು ಆಸ್ವಾದಿಸುವುದಕ್ಕಾಗಿ, ಜಗದ ಉದ್ಧಾರಕ್ಕಾಗಿ. ಭಗವಂತನ ಈ ನರಲೀಲೆಯ ನಾಟಕ ಅತ್ಯಂತ ಮಧುರ, ಮನೋಹರ, ಚಿತ್ತಾಕರ್ಷಕ. ಭಗವಂತನ ಆಚರಣೆಗಳೆಲ್ಲವೂ ಸಾಮಾನ್ಯ ಮನುಷ್ಯರಂತೆಯೇ ಇರುವುದರಿಂದ ಅವನನ್ನು ಪ್ರತ್ಯೇಕಿಸಿ ಗುರುತಿಸುವುದು ಕಠಿಣ. ಹಸಿವು, ಬಾಯಾರಿಕೆ, ರೋಗ, ಶೋಕ, ಭಯ–ಕ್ರೋಧ ಇವೆಲ್ಲವೂ ಸಾಮಾನ್ಯ ಮನುಷ್ಯರಲ್ಲಿ ಇರುವಂತೆಯೇ ಅವತಾರಪುರುಷನಲ್ಲಿಯೂ ಪ್ರಕಟಗೊಳ್ಳುತ್ತವೆ. ಸೀತೆಯ ವಿಯೋಗದ ಶೋಕದಿಂದ ಉಂಟಾದ ಮಾನಸಿಕ ವ್ಯಥೆಯಿಂದ ಕೋಪಗೊಳ್ಳುವ ಶ್ರೀರಾಮಚಂದ್ರ, ಸಮುದ್ರಾಧಿಪತಿಗೆ ಬಾಣಪ್ರಯೋಗ ಮಾಡಲು ಮುಂದಾಗುತ್ತಾನೆ. ಗೋಕುಲದ ಗೋವಳಿಗನಾದ ಶ್ರೀಕೃಷ್ಣ, ಹಸುಗಳನ್ನು ಮೇಯಿಸಿದ; ಸುದಾಮನನ್ನು ಬೆನ್ನಮೇಲೆ ಕೂರಿಸಿಕೊಂಡು, ಗೆಳೆಯರೊಡನೆ ಆಟವಾಡಿದ; ಗೋಪಿಯರೊಂದಿಗೆ ನರ್ತನ ಮಾಡಿದ. ಹಾಲು ಬೆಣ್ಣೆ ಕದ್ದು ತಿಂದು ತಾಯಿ ಯಶೋದೆಯ ಭಯದಿಂದಾಗಿ ಅವಿತು ಕುಳಿತ! ಈ ಎಲ್ಲಾ ಲೀಲೆಗಳನ್ನು ನೋಡುವುದು, ಕೇಳುವುದು ಮನಕ್ಕೆ ಆಹ್ಲಾದವನ್ನು ಉಂಟುಮಾಡುತ್ತದೆ. ಹಾಗೆಯೇ ಬಾಲಕ ಗದಾಧರ ಬೆಳಗ್ಗೆ ಪುರಿ ಮತ್ತು ಜಿಲೇಬಿ ತಿನ್ನುತ್ತಾನೆ. ಹಲದಾರಪುಕುರವೆಂಬ ಕೊಳದಲ್ಲಿ ಸಂಗಡಿಗರೊಡನೆ ಈಜುತ್ತಾನೆ. ನಾಟಕದ ಗುಂಪು ಕಟ್ಟಿಕೊಂಡು ಮಾಣಿಕ್‌ರಾಜನ ಮಾವಿನ ತೋಪಿನಲ್ಲಿ ನಾಟಕವಾಡಿ ಅಭಿನಯಿಸುತ್ತಾನೆ, ಬಡ ನೇಯಿಗೆವಳಂತೆ ವೇಷ ಧರಿಸಿಕೊಂಡು, ದುರ್ಗಾದಾಸ ಪೈನ್‌ನ  ಅಹಂಕಾರವನ್ನೇ ಚೂರ್ಣಮಾಡುತ್ತಾನೆ. ನಾವು ಈ ರೀತಿಯ ನೂರಾರು ಅವತಾರ ಗುಣಗಳನ್ನು ಶ್ರೀರಾಮಕೃಷ್ಣರ ಜೀವನದಲ್ಲಿಯೂ ಆಸ್ವಾದಿಸಿ ಆನಂದಿಸಬಹುದು.

**'ನರರೂಪಧರ ನಿರ್ಗುಣ ಗುಣಮಯ್' – 'ಗುಣಾತೀತನಾದರೂ ದಿವ್ಯಗುಣಶಾಲಿ ಮತ್ತು ನರರೂಪಧರನು' ಎಂದು ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು ಸ್ತುತಿಸಿದ್ದಾರೆ. ಈ ನರರೂಪದ ವೈಶಿಷ್ಟ್ಯವೇನು ಎಂಬುದನ್ನು ಸರ್ವಾಂಗ ಸುಂದರವಾಗಿ ಬಣ್ಣಿಸಿರುವ ಪೂಜ್ಯ ಸ್ವಾಮೀಜಿಯವರು ಅಮೆರಿಕದ ಸೆಂಟ್ ಲೂಯಿಸ್ ವೇದಾಂತ ಸೊಸೈಟಿಯ ಮುಖ್ಯಸ್ಥರಾಗಿದ್ದಾರೆ. ಹಲವಾರು ಗ್ರಂಥಗಳನ್ನು ರಚಿಸಿರುವ ಮತ್ತು ಅನುವಾದಿಸಿರುವ ಸ್ವಾಮೀಜಿಯವರು ಮೂಲ ಬಂಗಾಳಿಯಲ್ಲಿ ಬರೆದಿರುವ ಲೇಖನದ ಉಪೋದ್ಘಾತ ಭಾಗದ ಅನುವಾದ ಇದು. ಇದು ರಾಮಕೃಷ್ಣ ಮಹಾಸಂಘದ ಬಂಗಾಳಿ ಪತ್ರಿಕೆ 'ಉದ್ಬೋಧನ'ದ ಸೆಪ್ಟೆಂಬರ್ ೨೦೧೧ ಸಂಚಿಕೆಯಲ್ಲಿ ಪ್ರಕಟವಾಗಿದೆ.**